ಹನಿ

# ಇಂದ್ರಮ್ಮನ ಆದಾಯ



ಖಾಸಗಿ ಕಂಪೆನಿಗಳಲ್ಲಿ ಆದಾಯ ಹೆಚ್ಚಳವೇ ಮುಖ್ಯ ಸಾಧನೆ; ಉಳಿದದ್ದೆಲ್ಲ ಗೌಣ ಎನ್ನುವುದು ಪದೇ ಪದೇ ಸಾಬೀತಾಗುತ್ತಿದೆ. ಇದೀಗ ಪೆಪ್ಸಿಕೋ ಕಂಪೆನಿಯ ಚೇರ್ ಮನ್ ಮತ್ತು ಸಿಇಓ ಆಗಿರುವ ಇಂದ್ರಾ ನೂಯಿ ವಿಷಯದಲ್ಲೂ ಅದೇ ವರಾತೆ. ಪೆಪ್ಸಿಕೊ ಆದಾಯ ಈ ಹಿಂದಿನ ವರ್ಷಗಳಂತೆ ಏರುತ್ತಿಲ್ಲವಂತೆ. ಕೆಲವೆಡೆ ವಹಿವಾಟು ಕುಸಿದಿದೆಯಂತೆ. ಹಾಗಾಗಿ ಇಂದ್ರಾ ನೂಯಿ ಅವರ ಸಂಬಳ, ಸವಲತ್ತುಗಳಲ್ಲಿ ಕಡಿತವಾಗುವ ಸಾಧ್ಯತೆ ಇದೆ ಎನ್ನುವುದೀಗ ಉದ್ಯಮ ವಲಯದ ಚರ್ಚೆಯ ಸುದ್ದಿ.

ಚೆನ್ನೈ ಸಂಜಾತೆ ಇಂದ್ರಾ ನೂಯಿ, ಜಾಗತಿಕ ಉದ್ಯಮ ವಲಯದಲ್ಲಿ ಭಾರತೀಯ ಮಹಿಳೆಯರ ಸಾಧನೆಗೆ ಸಂದ ಗೌರವವೆಂದೇ ತಿಳಿದುಕೊಳ್ಳಬಹುದು. 1994ರಲ್ಲಿ ಪೆಪ್ಸಿಕೋ ಸೇರಿದ ಇಂದ್ರಾ ನೂಯಿ, ಹಂತ ಹಂತವಾಗಿ ಮೇಲೇರಿ 2007ರಲ್ಲಿ ಕಂಪೆನಿಯ ಸಿಇಓ ಆದರು. ಕಳೆದ ಒಂದು ದಶಕದಲ್ಲಿ ಆಕೆಯ ವ್ಯವಹಾರ ಜಾಣ್ಮೆಯಿಂದಾಗಿ ಪೆಪ್ಸಿಕೋ ಆದಾಯ ಶೇಕಡಾ 72ರಷ್ಟು ಏರಿದ್ದೂ ನಿಜ. ಹಾಗೆಂದೇ ಅವರ ಸಂಬಳ, ಸವಲತ್ತುಗಳೂ ಏರಿಕೆಯಾದವು. 16 ಲಕ್ಷ ಡಾಲರ್ ತಿಂಗಳ ಮೂಲ ಸಂಬಳದ ಸಹಿತ, 2011ರಲ್ಲಿ ಅವರ ವೈಯಕ್ತಿಕ ಆದಾಯ 1.7 ಕೋಟಿ ಡಾಲರ್ ಆಗಿದ್ದೇ ಕಾರ್ಪೊರೇಟ್ ವಲಯ ಮೂಗಿನ ಮೇಲೆ ಬೆರಳು ಇರಿಸಿಕೊಂಡಿತ್ತು. ಪೆಪ್ಸಿಕೋ ಜಗತ್ತಿನಲ್ಲೇ ಎರಡನೆಯ ಅತ್ಯಂತ ದೊಡ್ಡ ಆಹಾರ–ಪಾನೀಯ ಕಂಪೆನಿಯಾಗಿ ಬೆಳೆಯುವಲ್ಲಿ ಇಂದ್ರಾ ನೂಯಿ ಪಾತ್ರ ಮಹತ್ವದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಕಾಲೇಜಿನಲ್ಲಿ ಪಿಸಿಎಂ ಓದಿ, ಕೋಲ್ಕತ್ತಾದ ಐಐಎಂ ನಲ್ಲಿ ಎಂಬಿಎ ಮಾಡಿ, ಯೇಲ್ ಸ್ಕೂಲ್ ಆಫ್ ಮ್ಯಾನೇಜ್ ಮೆಂಟ್‌ನಲ್ಲಿ ಮಾಸ್ಟರ್ ಡಿಗ್ರಿ ಪಡೆದ ಇಂದ್ರಾ, ಜಗತ್ತಿನ ಪ್ರಭಾವಶಾಲಿ ಉದ್ಯಮಿಗಳಲ್ಲಿ ಮೊದಲಿಗರು ಎಂದು 2009 ಮತ್ತು 2010ರಲ್ಲಿ 'ಫಾರ್ಚೂನ್' ಗುರುತಿಸಿತ್ತು. ಫೋರ್ಬ್ಸ್ ಪತ್ರಿಕೆಯ 2010ರ ಸಮೀಕ್ಷೆ ಪ್ರಕಾರ ಈಕೆ ಜಗತ್ತಿನ 6ನೇ ಅತ್ಯಂತ ಪ್ರಭಾವಶಾಲಿ ಮಹಿಳೆ! ಪೆಪ್ಸಿಕೋ ಆದಾಯ ಹೆಚ್ಚಿಸುವಲ್ಲಿ 'ಯಮ್!ಬ್ರಾಂಡ್' ರೆಸ್ಟೋರೆಂಟ್‌ಗಳ ಸ್ಥಾಪನೆ, ಟ್ರೋಪಿಕಾನಾ ಸಹಿತ ಹಲವು ಬ್ರಾಂಡ್‌ಗಳ ಖರೀದಿ ಮುಂತಾಗಿ ಹಲವು ಕ್ರಮಗಳನ್ನು ಕೈಗೊಂಡಿರುವ ಇಂದ್ರಾ, ಕಂಪೆನಿಯ ಈಗಿನ ಆದಾಯ ಕುಸಿತವನ್ನು ತಡೆಗಟ್ಟಲು ಏನು ಮಾಡಬಹುದು.. ಎನ್ನುವ ಕುತೂಹಲ ಉದ್ಯಮ ವಲಯದ್ದು.

---

# ಸೇನೆಯಲ್ಲಿ ಕಿರಿಕಿರಿ



ಭಾರತೀಯ ಸೇನೆಯಲ್ಲಿ ಲಂಚದ ವಾಸನೆ ಎಲ್ಲರ ಮೂಗಿಗೆ ಅಡರುತ್ತಿದೆ. ಸೇವೆಯಲ್ಲಿರುವಾಗಲೇ ಸೇನೆಯನ್ನು ಕೋರ್ಟ್ ಮೆಟ್ಟಿಲು ಹತ್ತಿಸಿದ ಖ್ಯಾತಿಯ ಭೂ ಸೇನಾ ಮುಖ್ಯಸ್ಥ ವಿಜಯ್ ಕುಮಾರ್ ಸಿಂಗ್, ಸರಕಾರದ ವಿರುದ್ಧ ತೊಡೆತಟ್ಟಿ ನಿಂತಿದ್ದಾರೆ. ಪ್ರತಿದಿನವೂ ಪತ್ರಿಕೆಗಳ ಮುಖಪುಟದಲ್ಲಿ ಕಾಣಿಸಿಕೊಳ್ಳುತ್ತಿರುವ ವಿ.ಕೆ.ಸಿಂಗ್, ಸೇನೆಯಲ್ಲಿ ನಡೆಯುತ್ತಿರುವ ಲಂಚಾವತಾರದ ಬಗ್ಗೆ ಬಹಿರಂಗವಾಗಿ ಮಾತನಾಡಿ, ಸರಕಾರವನ್ನು ಮುಜುಗರಕ್ಕೆ ಈಡು ಮಾಡಿದ್ದಾರೆ. ಶಸ್ತ್ರಾಸ್ತ್ರ ಖರೀದಿಯಲ್ಲಿ ಲಂಚದ ಪಾತ್ರದ ಬಗ್ಗೆ ವಿ.ಕೆ.ಸಿಂಗ್ ಮಾಡಿರುವ ಆರೋಪ ಸೇನೆಯನ್ನು ಜನರು ಮತ್ತಷ್ಟು ಅನುಮಾನದಿಂದ ನೋಡುವಂತೆ ಮಾಡಿದೆ. ಈ ಮಧ್ಯೆ 'ನೆರೆಯವರು ಯುದ್ಧಕ್ಕೆ ಬಂದರೆ ನಮ್ಮ ಸೇನೆ ಹೋರಾಡುವ ಸನ್ನದ್ಧ ಸ್ಥಿತಿಯಲ್ಲಿ ಇಲ್ಲ' ಎಂಬರ್ಥದ ಪತ್ರವೊಂದನ್ನು ವಿ.ಕೆ.ಸಿಂಗ್ ಸರಕಾರಕ್ಕೆ ಬರೆದಿದ್ದು ಅದೂ ಸೋರಿಕೆಯಾಗಿ ಇಡೀ ದೇಶವೇ ಮುಜುಗರಕ್ಕೆ ಒಳಗಾಗಿದೆ. ಮುಖ್ಯವಾಗಿ ರಕ್ಷಣಾ ಸಚಿವ ಎ.ಕೆ.ಆ್ಯಂಟನಿ ಸಂಸತ್ತಿನಲ್ಲಿ ಪೇಚಿಗೆ ಸಿಲುಕಿದ್ದೂ ಆಗಿದೆ.

ದಕ್ಷತೆ ಮತ್ತು ಪ್ರಾಮಾಣಿಕತೆಗೆ ಸಂಬಂಧಿಸಿ ರಕ್ಷಣಾ ಸಚಿವ ಆ್ಯಂಟನಿ ಮತ್ತು ಸೇನಾ ಮುಖ್ಯಸ್ಥ ವಿ.ಕೆ.ಸಿಂಗ್ ಇಬ್ಬರ ಬಗ್ಗೆಯೂ ಎರಡನೇ ಮಾತಿಲ್ಲ. ಹಾಗೆಂದು ಸೇನೆಯಲ್ಲಿ ಎಲ್ಲವೂ ಸರಿಯಾಗಿದೆ ಎಂದು ಯಾರೂ ಭಾವಿಸಿಲ್ಲ. ವಿ.ಕೆ.ಸಿಂಗ್ ಸುತ್ತ ಈಗ ಎದ್ದಿರುವ ಪ್ರತಿಯೊಂದು ವಿವಾದವೂ ಸೇನೆಯ ಮತ್ತು ಸರಕಾರದ ಮಾನವನ್ನು ಇನ್ನಷ್ಟು ಹರಾಜು ಹಾಕುವುದರಲ್ಲಿ ಸಂಶಯವಿಲ್ಲ. ಮುಖ್ಯವಾಗಿ ವಿ.ಕೆ.ಸಿಂಗ್ ಈ ವಿಷಯದ ಬಗ್ಗೆ ಹೆಚ್ಚು ಮುತ್ಸದ್ದಿತನದಿಂದ ವರ್ತಿಸಬೇಕಾದ ಅಗತ್ಯವಿದೆ. ವರ್ಷದ ಹಿಂದೆ ಲಂಚದ ಆಮಿಷ ಒಡ್ಡಿದಾಗಲೇ ವಿ.ಕೆ.ಸಿಂಗ್ ಈ ವಿಷಯವನ್ನು ತಾರ್ಕಿಕ ಅಂತ್ಯಕ್ಕೆ ಏಕೆ ಒಯ್ದಿಲ್ಲ ಎನ್ನುವ ಪ್ರಶ್ನೆಯೂ ಮಹತ್ವದ್ದೇ. ವಿಷಯದ ಕುರಿತ ತನಿಖೆ ಮುಗಿದ ಬಳಿಕ ಇನ್ನೆಷ್ಟು ವಿಷಯಗಳು ಹೊರಬರುತ್ತೋ ಗೊತ್ತಿಲ್ಲ.

ಎಲ್ಲ ಆರಂಭವಾದದ್ದು ವಿ.ಕೆ.ಸಿಂಗ್ ಅವರ ಜನ್ಮದಿನಾಂಕದ ತಪ್ಪು ನಮೂದಿನೊಂದಿಗೆ. 14 ವರ್ಷ ವಯಸ್ಸಿನಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಗೆ (ಎನ್‌ಡಿಎ) ಸೇರುವಾಗ ಅರ್ಜಿಯಲ್ಲಿ ವಿ.ಕೆ.ಸಿಂಗ್ ತನ್ನ ಜನ್ಮದಿನಾಂಕವನ್ನು ಒಂದು ವರ್ಷ ಹಿಂದಕ್ಕೆ ತಪ್ಪಾಗಿ ನಮೂದಿಸಿದ್ದೇ ಈಗ ವಿವಾದಕ್ಕೆ ಕಾರಣವಾಗಿದೆ. ಈ ಕಣ್ತಪ್ಪನ್ನು ಬೇರೆಲ್ಲ ಕಡೆ ಸರಿ ಮಾಡಿದ್ದರೂ ಮಿಲಿಟರಿ ಕಾರ್ಯದರ್ಶಿ ಶಾಖೆ ತಿದ್ದಲು ಒಪ್ಪಿಕೊಂಡಿಲ್ಲ. ವಿಷಯ ಕೋರ್ಟು ಮೆಟ್ಟಿಲು ಹತ್ತಿ ಅವರೂ 'ನೀವೇ ಏನಾದರೂ ಮಾಡಿಕೊಳ್ಳಿ' ಎಂದಿದ್ದಾರೆ. ತಪ್ಪು ಮಾಹಿತಿಯನ್ನೇ ಅನುಸರಿಸಿದರೆ ಈ ಮಾರ್ಚ್ ಕೊನೆಗೆ ವಿ.ಕೆ.ಸಿಂಗ್ ನಿವೃತ್ತಿಯಾಗುತ್ತಾರೆ. ತಿದ್ದುಪಡಿ ಮಾಡಿದರೆ ಇನ್ನೊಂದು ವರ್ಷ ಹುದ್ದೆಯಲ್ಲಿ ಉಳಿಯುತ್ತಾರೆ.

ವಿ.ಕೆ.ಸಿಂಗ್ ದಕ್ಷತೆಯ ಬಗ್ಗೆ ಹಲವು ದಾಖಲೆಗಳಿವೆ. ಹರಿಯಾಣ ಸಂಜಾತ ಈ ಅಧಿಕಾರಿಯ ಅಪ್ಪ ಸೇನೆಯಲ್ಲಿ ಕರ್ನಲ್ ಆಗಿದ್ದರು. ಅಜ್ಜ ಹಿರಿಯ ಜೂನಿಯರ್ ಕಮೀಶನ್‌ಡ್ ಅಧಿಕಾರಿ ಆಗಿದ್ದರು. 1970ರಲ್ಲಿ ರಜಪೂತ ರೆಜಿಮೆಂಟಿನ ಎರಡನೇ ಬೆಟಾಲಿಯನ್‌ಗೆ ಸೇರಿಕೊಂಡ ವಿ.ಕೆ.ಸಿಂಗ್, ಉಗ್ರಗಾಮಿಗಳ ನುಸುಳುವಿಕೆ ತಡೆಯ ಪಡೆಯಲ್ಲಿ ಕಮಾಂಡೋ ಆಗಿ ಕೆಲಸ ಮಾಡಿದವರು. ಕಮಾಂಡೋ ಆಗಿದ್ದ ಸೇನಾ ಮುಖ್ಯಸ್ಥರಾದ ಮೊದಲಿಗರೂ ಹೌದು. ಅಮೆರಿಕದ ಪೆನ್ಸಿಲ್ವೇನಿಯಾದ ಆರ್ಮಿ ವಾರ್ ಕಾಲೇಜ್‌ನಲ್ಲಿ ಪದವಿ ಪಡೆದ ಮೊದಲ ಭಾರತೀಯ ಅಧಿಕಾರಿಯೂ ಹೌದು. 1971ರ ಬಾಂಗ್ಲಾ ಸಮರದಲ್ಲಿ ಭಾಗಿಯಾದದ್ದು, ಅತಿವಿಶಿಷ್ಟ ಸೇವಾ ಪದಕ ಪಡೆದದ್ದು– ಹೀಗೆ ಅವರ ಸಾಧನೆಗಳು ಹಲವಾರಿವೆ. ಆದರೆ ಈಗ ಎದ್ದಿರುವ ವಿವಾದ ಅವರನ್ನು ಎಲ್ಲಿಗೆ ಒಯ್ದು ನಿಲ್ಲಿಸುತ್ತೋ ಗೊತ್ತಿಲ್ಲ. ಸಜ್ಜನನ ಸಿಟ್ಟು ದವಡೆಗೆ ಮೂಲವಾಗಬಾರದು. ಹಾಗೆಯೇ ಸೇನೆಯಲ್ಲಿರುವ ದಕ್ಷ ಅಧಿಕಾರಿಗಳನ್ನು ಕಳೆದುಕೊಳ್ಳಲು ಸರಕಾರದ ಕೀಳು ರಾಜಕೀಯವೂ ಕಾರಣವಾಗಬಾರದು. ಹಾಗಾಬಹುದೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65